# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.

ಸಿಸಿ ಸಂಖ್ಯೆ. **324/2023**
**PW -1**

ಸಾಕ್ಷಿಗೆ ದಿನಾಂಕಃ **10-01-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಟಿ ಎನ್ ಸಿ ಆರೋಪಿ ಪರ ವಕೀಲರಿಂದ

1. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಕೋವಿಡ -19 ಸಾಂಕ್ರಾಮಿಕ ರೋಗವು ಹೆಚ್ಚು ಹರಡುತ್ತಿತ್ತು ಎಂದರೆ ಸಾಕ್ಷಿಯು ಅಷ್ಟೊಂದು ಏನು ಇರಲಿಲ್ಲ ಎಂದು ಹೇಳುತ್ತಾರೆ. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಜನರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯ ಬಗ್ಗೆ ಭಯ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಇನ್ನೂ ಕೋವಿಡ್ ಲಸಿಕೆ ಬಂದಿರಲಿಲ್ಲ ಎಂದರ ಸಾಕ್ಷಿಯು ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಕುಟುಂಬದ ಸದಸ್ಯರ ಅಂತರವನ್ನು ಕಾಪಾಡಿಕೊಳ್ಳುವಷ್ಟು ಸಾಂಕ್ರಾಮಿಕ ರೋಗದ ಭಯ ಇತ್ತು ಎಂದರೆ ಸರಿ.

2. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಸಾರ್ವಜನಿಕರಿಗೆ ಸಾರ್ವಜನಿಕ ಸ್ಥಳದಲ್ಲಿ ಎಲ್ಲಿಯೂ ಓಡಾಡದಂತೆ ಸರ್ಕಾರವು ಕಟ್ಟುನಿಟ್ಟಿನ ನಿಯಮವನ್ನು ಹೊರಡಿಸಿತ್ತು ಎಂದರೆ ಸಾಕ್ಷಿಯು ಸಾರ್ವಜನಿಕ ಸ್ಥಳದಲ್ಲಿ ಓಡಾಡಲು ಸ್ವಲ್ಪ ಸಮಯಾವಕಾಶವನ್ನು ಸರ್ಕಾರವು ಸಾರ್ವಜನಿಕರಿಗೆ ಕಲ್ಪಿಸಿತ್ತು ಎಂದು ನುಡಿಯುತ್ತಾರೆ.

3. ಆರೋಪಿಯು ಹೊಣಕೆರೆ ಹೋಬಳಿಯ ಹಂಡೇನಹಳ್ಳಿ ಗ್ರಾಮದವರು. ನಮ್ಮ ಊರಿನಿಂದ ಹಂಡೇನಹಳ್ಳಿಗೆ ಸುಮಾರು 15 ಕಿಲೋಮೀಟರ ಅಂತರ ಇರಬಹುದು. ನಗರ ಪಟ್ಟಣಗಳಲ್ಲಿ ಸಾರ್ವಜನಿಕರು ಓಡಾಡುವುದನು ಸರ್ಕಾರವು ಕೋವಿಡ್-19 ಸಮಯದಲ್ಲಿ ನಿರ್ಭಂದವನ್ನು ತಂದಿತ್ತು ಎಂದರೆ ಸಾಕ್ಷಿಯು ಸ್ವಲ್ಪ ಸಮಯದವರೆಗೆ ಓಡಾಡಲು ಅವಕಾಶವನ್ನು ಸರ್ಕಾರವು ನೀಡಿತ್ತು ಎಂದು ನುಡಿಯುತ್ತಾರೆ. ನಾಗಮಂಗಲ ಟೌನನಿಂದ ನಮ್ಮ ಮನೆಯು 2 ಕಿಲೋಮೀಟರ ದೂರದಲ್ಲಿ ಇದೆ ಎಂದರೆ ಸರಿ. ಕೋವಿಡ್-19 ಸಮಯದಲ್ಲಿ ಯಾವುದೇ ವಾಹನಗಳು ಸಾರ್ವಜನಿಕ ಸ್ಥಳದಲ್ಲಿ ಓಡಾಡದಂತೆ ನಿರ್ಭಂಧ ವೇರಿತ್ತು ಎಂದರೆ ಸಾಕ್ಷಿಯು ಆಟೋಗಳು ಓಡಾಡುತ್ತಿದ್ದುದಾಗಿ ನುಡಿಯುತ್ತಾರೆ. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಇರುತ್ತೇವೆ. ಆರೋಪಿಗೆ ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು ಒಬ್ಬನೇ ಇದ್ದೆ, ನನ್ನ ಮಕ್ಕಳು ಹೊರಗಡೆ ಆಟೋ ಆಡುತ್ತಿದ್ದರು, ನನ್ನ ಹೆಂಡತಿ ಪಕ್ಕದ ಮನೆಗೆ ಹೋಗಿದ್ದರು.

4. ನಾನು ವ್ಯವಸಾಯ ಮತ್ತು ಬೀಡಾ ಅಂಗಡಿಯನ್ನು ನಡೆಸುತ್ತೇನೆ. ನನಗೆ 3 ಎಕರೆ ಜಮೀನು ಇದೆ. ನಾಗಮಂಗಲದ ಮಂಡ್ಯ ರಸ್ತೆಯ ಸರ್ಕಲ್ ನಲ್ಲಿ ಸದರಿ ಬೀಡಾ ಅಂಗಡಿ ಇರುತ್ತದೆ. ಬೀಡಾ ಅಂಗಡಿ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ಬೀಡಾ ಅಂಗಡಿಯಿಂದ ಪ್ರತಿದಿನ ಸುಮಾರು 4 ಸಾವಿರ ಆದಾಯ ಬರುತ್ತದೆ. ಬೀಡಾ ಅಂಗಡಿಯಿಂದ 4 ಸಾವಿರ ಆದಾಯ ಬರುವ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಂಗಡಿಯನ್ನು ನಡೆಸಿದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಕಡ್ಡಾಯವಾಗಿ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂಬುದು ನನಗೆ

ಗೊತ್ತು. ನಾನು ಯಾವುದೇ ಬೀಡಾ ಅಂಗಡಿಯನ್ನು ನಡೆಸುತ್ತಿರುವುದಿಲ್ಲ ಒಂದು ವೇಳೆ ನಾನು ನಡೆಸುತ್ತಿದ್ದರೆ ಆ ಬಗ್ಗೆ ಪರವಾನಿಗೆಯನು ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಜೀವನ ಅವಶ್ಯಕ ವಸ್ತುಗಳ ವ್ಯವಹಾರ ಹೊರತು ಪಡಿಸಿ ಉಳಿದ ಎಲ್ಲಾ ವ್ಯವಹಾರಗಳನ್ನು ಕೋವಿಡ -19 ಸಾಂಕ್ರಾಮಿಕ ಹರಡುವ ಪ್ರಯುಕ್ತ ಸ್ಥಗಿತಗೊಳಿಸಲಾಗಿತ್ತು ಎಂದರೆ ಸರಿಯಲ್ಲ. ನಾನು ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಸರ್ಕಾರವು 12 ಗಂಟೆಯ ತನಕ ಅಂಗಡಿ ತೆರೆಯಲು ಅನುಮತಿಯನ್ನು ನೀಡಿದ್ದು ಆ ಪ್ರಕಾರ ಆ ಸಮಯದಲ್ಲಿ ಅಂಗಡಿಯಲ್ಲಿ ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ.

5. ಆರೋಪಿಯ ಗಂಡನಿಂದ ನಾನು ಒಂದು ನಿವೇಶನವನ್ನು ಕ್ರಯಕ್ಕೆ ಪಡೆದಿರುತ್ತೇನೆ. ನನ್ನ ಮತ್ತು ಆರೋಪಿಯ ಗಂಡನ ನಡುವೆ ಯಾವುದೇ ಹಣಕಾಸಿನ ವ್ಯವಹಾರವು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಆದರೆ ನಾನು ಮತ್ತು ಆರೋಪಿಯ ಗಂಡ ಅನ್ಯೋನ್ಯವಾಗಿ ಇದ್ದೆವು ಎಂದು ನುಡಿಯುತ್ತಾರೆ. 2017 ರಲ್ಲಿ ನಾನು ಕೊನೆಯಬಾರಿಗೆ ಆರೋಪಿಯ ಗಂಡನನ್ನು ಬೇಟಿಯಾಗಿರುತ್ತೇನೆ. 2017 ರ ನಂತರ ನನ್ನ ಮತ್ತು ಆರೋಪಿಯ ನಡುವೆ ಮಾತುಕತೆ ಇತ್ತು.

6. ಆರೋಪಿಯು ಒಂದು ವರ್ಷದ ನಂತರ ಸಾಲವನ್ನು ವಾಪಸ್ಸು ಕೊಡವುದಾಗಿ ಒಪ್ಪಿಕೊಂಡಿದ್ದರು. ಒಂದು ವರ್ಷ ಕಳೆದ ನಂತರ ನಾನು 15 ದಿನದ ನಂತರದಲ್ಲಿ ಆರೋಪಿಯನ್ನು ಬೇಟಿಯಾಗಿ ಹಣವನ್ನು ವಾಪಸ್ಸು ಕೇಳಿರುತ್ತೇನೆ. ದಿನಾಂಕ 25-06-2021 ರ ಚೆಕ್ಕನ್ನು ನನಗೆ ಬರೆದುಕೊಟ್ಟಿರುತ್ತಾರೆ. 3 ½ ಲಕ್ಷ ರೂಪಾಯಿ ದೊಡ್ಡ ಮೊತ್ತ ಎಂದರೆ ಸರಿ. ಚೆಕ್ಕನಲ್ಲಿ ನಮೂದಿಸಿರುವ ದಿನಾಂಕದಂದೇ ಚೆಕ್ಕನ್ನು

ನಗದೀಕರಿಸಿಕೊಳ್ಳಲು ಬ್ಯಾಂಕಿಗೆ ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಬೇಡಿ, ಸದರಿ ಚೆಕ್ಕನಲ್ಲಿ ನಮೂದಿಸಿರುವ ಹಣವನ್ನು ಕೊಟ್ಟು ಚೆಕ್ಕನ್ನು ವಾಪಸ್ಸು ಕೊಡುವುದಾಗಿ ಆರೋಪಿಯು ಹೇಳಿದ್ದರು ಎಂದು ನುಡಿಯುತ್ತಾರೆ.

7. ನಾನು ಆರೋಪಿಗೆ ಸಾಲವನ್ನು ವ್ಯವಸಾಯದಿಂದ ಹಣ ಮತ್ತು ಬೀಡಾ ಅಂಗಡಿಯಿಂದ ಬಂದ ಹಣವನ್ನು ಕೊಟ್ಟಿರುತ್ತೇನೆ. ಆರೋಪಿಗೆ ಹಣ ಕೊಟ್ಟೆ ಎಂದು ಹೇಳುವ ದಿನ ನನ್ನ ಬಳಿ 3,50,000/- ಹಣ ಇತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಸಾಕ್ಷಿಯು ಮುಂದುವರೆದು ನನ್ನ ಬಳಿ ನಗದು ಹಣ ಇತ್ತು ಅದರಲ್ಲಿ ಸಾಲ ಕೊಟ್ಟಿರುವುದಾಗಿ ನುಡಿಯುತ್ತಾರೆ. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿ. 20 ಸಾವಿರಕ್ಕಿಂತ ಹೆಚ್ಚು ಹಣವನ್ನು ನಗದು ರೂಪದಲ್ಲಿ ಕೊಡಬಾರದು ಎಂಬ ನಿಯಮ ಇರುವುದು ನನಗೆ ಗೊತ್ತಿಲ್ಲ.

8. ಆರೋಪಿಯ ಕುಟುಂಬದ ವ್ಯವಹಾರವನ್ನು ಆರೋಪಿಯ ಗಂಡನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿ ಮತ್ತು ಆರೋಪಿಯ ಗಂಡನ ತಂದೆ ಇಬ್ಬರು ಒಟ್ಟಿಗೆ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 2019 ರಲ್ಲಿ ಆರೋಪಿಯ ಗಂಡ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಗಂಡನನ್ನು ಕಳೆದುಕೊಂಡ ದುಃಖದಲ್ಲಿ ಆರೋಪಿಯು ಇದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

9. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

ಆರೋಪಿಗೆ ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆಯೋ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ.

10. ನಾನು ಆರೋಪಿಗೆ ಅಪರಚಿತ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಾಕ್ಷಿಯು ಮುಂದುವರೆದು ಅವರ ಕುಟುಂಬದ ಹಬ್ಬಗಳಿಗೆ ಮತ್ತು ಮದುವೆ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1-ಎ ರಂತೆ ಆರೋಪಿಯು ಸಹಿಯನ್ನು ನನ್ನ ಮುಂದೆಯೇ ಬರೆದಿರುತ್ತಾರೆ. ನಿಪಿ 1 ರಲ್ಲಿರುವ ಒಕ್ಕಣೆಯನ್ನು ಮೊದಲೇ ಭರ್ತಿ ಮಾಡಿಕೊಂಡು ಬಂದು ನನ್ನ ಮುಂದೆ ಸಹಿ ಮಾಡಿ ಕೊಟ್ಟಿದ್ದರು. ನಿಪಿ 1 -ಎ ರಂತೆ ಇರುವ ಸಹಿಯು ಆರೋಪಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮುಂದೆಯೇ ಆರೋಪಿ ಸಹಿ ಮಾಡಿರುವುದಾಗಿ ನುಡಿಯುತ್ತಾರೆ.

11. ಆರೋಪಿಯು ನನ್ನ ಬಳಿ ಯಾವತ್ತೂ ಸಾಲ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಈ ಹಿಂದೇ ಆಗಿದ್ದ ವ್ಯವಹಾರದಲ್ಲಿ ನಿಪಿ1 ಖಾಲಿ ಚೆಕ್ಕನ್ನು ನಾನು ಪಡೆದುಕೊಂಡಿದ್ದು, ಶ್ರೀ ಪ್ರಭುಸ್ವಾಮಿ ವಕೀಲರ ಹಸ್ತಾಕ್ಷರದಲ್ಲಿ ನಿಪಿ1 ನ್ನು ಭರ್ತಿ ಮಾಡಿಸಿಕೊಂಡು, ಆರೋಪಿಯ ಸಹಿಯನ್ನು ನಾನೇ ಸೃಷ್ಟಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

12. ದಿನಾಂಕ 01-07-2021 ಕ್ಕೆ ವಿಜಯ ಬ್ಯಾಂಕಿಗೆ ಸೇರಿದ ಚೆಕ್ಕುಗಳು ತಮ್ಮ ಸಿಂಧುತ್ವವನ್ನು ಕಳೆದುಕೊಂಡಿದ್ದವು ಎಂದರೆ ಸರಿಯಲ್ಲ. ನಿಪಿ 1 ತನ್ನ ಸಿಂಧುತ್ವವನ್ನು ಕಳೆದುಕೊಂಡಿದ್ದರೂ ಸಹಾ ಬ್ಯಾಂಕಿನ ಅಧಿಕಾರಿಗಳೊಂದಿಗೆ

ಶರೀಕಾಗಿ ಸುಳ್ಳು ಹಿಂಬರಹವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವತ್ತು ನಮ್ಮ ಮನೆಗೆ ಬಂದು ಸಾಲವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವತ್ತು ಸಾಲದ ತೀರುವಳಿಗಾಗಿ ನಿಪಿ 1 ಚೆಕ್ಕನ್ನು ನನಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣ ವಸೂಲಿ ಮಾಡಲು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.